APRIL 28, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ರಾಜ್ಯ ಸರ್ಕಾರದ 'ಎಂಟು ಶಿಕ್ಷಣ ಖಾತ್ರಿಗಳು' ಯೋಜನೆ; 50 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ರಾಜ್ಯ ಮಾಹಿತಿ ಹಕ್ಕು ಆಯೋಗ; ಕಳೆದ ಒಂದು ವ ´ದಲ್ಲಿ, ಎರಡನೇ ಹಂತದ, 40 ಸಾವಿರ ಮೇಲ್ಮನವಿ ಪ್ರಕರಣಗಳ, ಇತ್ಯರ್ಥ.
- ಬೆಂಗಳೂರು ವಿಭಾಗದ, ಪ್ರಮುಖ ರೇಲ್ವೆ ನಿಲ್ದಾಣಗಳ, ಭದ್ರತೆ ಪರಿಶೀಲಿಸಿದ, ರೇಲ್ವೆ ರಕ್ಷಣಾ ದಳದ, ಮಹಾ ನಿರ್ದೇಶಕಿ ಸೋನಾಲಿ ಮಿಶ್ರಾ.
- ಉಡುಪಿಯ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜೆಮ್ಸ್ ಆಂಡ್ ಜಿವೆಲ್ರಿಗೆ, ಇಂದು ಕೇಂದ್ರ ಸಚಿವರಾದ, ನಿರ್ಮಲಾ ಸೀತಾರಾಮನ್, ಭೇಟಿ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯ ಸರ್ಕಾರ 'ಎಂಟು ಶಿಕ್ಷಣ ಖಾತ್ರಿಗಳು' ಎಂಬ ಯೋಜನೆ ರೂಪಿಸಿದ್ದು, ಈ ಸುಧಾರಣೆಗಳಿಂದ 50 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ ದೊರೆಯಲಿದೆ. ಪ್ರಸಕ್ತ ಶೈಕ್ಷಣಿಕ ವ ´ದಿಂದಲೇ, ಶಾಲಾ ಶಿಕ್ಷಣ ಇಲಾಖೆ, ಈ ಪ್ರಮುಖ ಬದಲಾವಣೆಗಳನ್ನು, ಜಾರಿಗೆ ತರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ, ಈ ವಿಷಯ ತಿಳಿಸಿದ್ದಾರೆ. ಶಿಕ್ಷಕರ ಲಭ್ಯತೆ, ಸುಧಾರಿತ ಮೂಲಸೌಕರ್ಯ, ಕಲಿಕೆ ಮತ್ತು ಬೋಧನಾ ಮಾಧ್ಯಮದ ಆಯ್ಕೆ, ಡಿಜಿಟಲ್ ಕಲಿಕೆ, ಕಲೆ ಮತ್ತು ಕ್ರೀಡಾ ಶಿಕ್ಷಣ, ಶೈಕ್ಷಣಿಕ ಗುಣಮಟ್ಟದ ಮೇಲ್ವಿಚಾರಣೆ, ಕೌಶಲ ಆಧಾರಿತ ತರಬೇತಿ ಹಾಗೂ ಉಚಿತ ಸಾರಿಗೆ, ನೂತನ ಯೋಜನೆ ಒಳಗೊಂಡಿದೆ ಎಂದು ಹೇಳಿದ್ದಾರೆ.

<><><>

ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರುದ್ಧ, ಶಿವಮೊಗ್ಗ ಜಿಲ್ಲಾಡಳಿತ ಹಾಗೂ ಕಾರ್ಮಿಕ ಇಲಾಖೆ, ಕಠಿಣ ಕಾನೂನು ಕ್ರಮಕ್ಕೆ ಮುಂದಾಗಿದೆ. ಕಾನೂನು ಉಲ್ಲಂಘಿಸಿ, ಮಕ್ಕಳನ್ನು ದುಡಿಮೆಗೆ ನಿಯೋಜಿಸುವ, ಮಾಲಿಕರಿಗೆ 50 ಸಾವಿರ ರೂಪಾಯಿ ದಂಡ ಹಾಗೂ ಜೈಲು ಶಿಕ್ಷೆಯ ಎಚ್ಚರಿಕೆ ನೀಡಲಾಗಿದೆ. ಅಪರಾಧದ ತೀವ್ರತೆ ಆಧಾರದಲ್ಲಿ, ಎರಡು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸುವ, ಪ್ರಾವಧಾನವಿದೆ ಎಂದು, ಜಿಲ್ಲಾ ಕಾರ್ಮಿಕ ಅಧಿಕಾರಿ ವೇಣುಗೋಪಾಲ ತಿಳಿಸಿದ್ದಾರೆ. ಮಕ್ಕಳ ಸಹಾಯವಾಣಿ ಸಂಖ್ಯೆ 1–0–9–8ಕ್ಕೆ ಕರೆ ಮಾಡಿ, ಸಾರ್ವಜನಿಕರು ದೂರು ದಾಖಲಿಸಬಹುದು.

<><><>

ರಾಜ್ಯ ಮಾಹಿತಿ ಹಕ್ಕು ಆಯೋಗ, ಕಳೆದ ಒಂದು ವರ್ಷದಲ್ಲಿ, 40 ಸಾವಿರದಷ್ಟು, ಎರಡನೇ ಹಂತದ, ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥಪಡಿಸಿದೆ ಎಂದು, ರಾಜ್ಯ ಮಾಹಿತಿ ಆಯುಕ್ತ, ಪ್ರಕಾಶ ನಾರಾಯಣ ಚನ್ನಾಳ ತಿಳಿಸಿದ್ದಾರೆ ಬೆಳಗಾವಿಯಲ್ಲಿ ಮಾತನಾಡಿದ ಅವರು, ಮೇಲ್ಮನವಿ ವಿಲೇವಾರಿ, ರಾಷ್ಟ್ರ ಮಟ್ಟದಲ್ಲಿ ದಾಖಲೆಯಾಗಿದೆ. ಮಾಹಿತಿ ಆಯೋಗದ ಬೆಳಗಾವಿ ಪೀಠದಲ್ಲಿ, ಪ್ರತಿದಿನ ಸುಮಾರು 40–60 ಅರ್ಜಿಗಳ ವಿಚಾರಣೆ ನಡೆಸಿ, ಇತ್ಯರ್ಥ ಪಡಿಸಲಾಗುತ್ತಿದೆ. 6 ರಿಂದ 7 ಸಾವಿರ ಅರ್ಜಿಗಳ ವಿಚಾರಣೆಗೆ, ಯೋಜನೆ ಹಾಕಿಕೊಳ್ಳಲಾಗಿದೆ ಎಂದರು.

<><><>

ಪ್ರಧಾನಮಂತ್ರಿ ಆಯುಷ್ಮಾನ್ ಭಾರತ, ಇನ್‌ಫ್ರಾಸ್ಟ್ರಕ್ಚರ್ ಹೆಲ್ತ್ ಮಿಷನ್ – ಪಿ.ಎಂ. ಅಭಿಮ್ – ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲಸೌಕರ್ಯ ಯೋಜನೆ ಅಡಿ, ಕಳೆದ ಐದು ವರ್ಷಗಳಲ್ಲಿ, ಕರ್ನಾಟಕ ರಾಜ್ಯಕ್ಕೆ, ಒಟ್ಟು ಸಾವಿರದ 928 ಕೋಟಿ 79 ಲಕ್ಷ ರೂಪಾಯಿ, ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಧಾರವಾಡದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಆವರಣದಲ್ಲಿ, ನೂತನ ಲಸಿಕಾ ಕೇಂದ್ರ ಹಾಗೂ ಜಿಲ್ಲಾ ಸಿವಿಲ್ ಆಸ್ಪತ್ರೆ ಆವರಣದಲ್ಲಿ, ಅತ್ಯಾಧುನಿಕ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯವನ್ನು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ಜೊತೆ, ಉದ್ಘಾಟಿಸಿ ಅವರು ಮಾತನಾಡಿದರು. ಸಾರ್ವಜನಿಕ ಆರೋಗ್ಯ ಹಾಗೂ ರೋಗ ಸಂಶೋಧನೆ, ಜನ ಸಾಮಾನ್ಯರಿಗೆ ಅಗತ್ಯವಿರುವ, ಔಷಧಿ ಪೂರೈಸಲು, ಕೇಂದ್ರ ಸರ್ಕಾರ ಆದ್ಯತೆ ನೀಡಿದೆ ಎಂದರು.

<><><>

ಧಾರವಾಡ ನೂತನ ಲಸಿಕಾ ಕೇಂದ್ರ, ಲಸಿಕಾ ಉಗ್ರಾಣದ ಶೀತಲ ಗೃಹ, ಲಸಿಕೆಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲಿದೆ. ಧಾರವಾಡ ಜಿಲ್ಲೆಯ, ಒಟ್ಟು 54 ಆರೋಗ್ಯ ಕೇಂದ್ರಗಳಿಗೆ, ಅಗತ್ಯಕ್ಕೆ ತಕ್ಕಂತೆ ಔಷಧಿ ಪೂರೈಸಲು, ಅನುಕೂಲವಾಗಲಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಎಸ್.ಎಂ. ಹೊನಕೇರಿ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ ಎಸ್.ಎಂ. ಹೊನಕೇರಿ ಧ್ವನಿ – 52 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರ ನೀತಿ ನಿರೂಪಣೆಯ ಪ್ರಮುಖ ಸಂಸ್ಥೆ, ನೀತಿ ಆಯೋಗ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಹೊಸ ದಿಲ್ಲಿಯ ನೀತಿ ಆಯೋಗದ ಸದಸ್ಯರಾಗಿ, ಯಾದಗಿರಿ ಜಿಲ್ಲೆ ತಜ್ಞ ವೈದ್ಯ, ಡಾಕ್ಟರ್ ಶ್ರೀನಿವಾಸ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಕೆ.ವಿ. ರಾಜು ನೇಮಕ ಗೊಂಡಿದ್ದಾರೆ.

<><><>

ಉಡುಪಿಯ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜೆಮ್ಸ್ ಆಂಡ್ ಜಿವೆಲ್ರಿ –ಐ.ಐ.ಜಿ.ಜೆ. ಗೆ ಇಂದು ಬೆಳಗ್ಗೆ 11 ಗಂಟೆಗೆ ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ಭೇಟಿ ನೀಡಲಿದ್ದಾರೆ. ಬಳಿಕ, ಮಧ್ಯಾಹ್ನ 3.30ಕ್ಕೆ ಮಂಗಳೂರು ದೇರಳಕಟ್ಟೆಯ, ಕೆ.ಎಸ್.ಹೆಗ್ಡೆ ಕ್ಷೇಮ ಸಭಾಂಗಣದಲ್ಲಿ, 'ವಿಕಸಿತ ಭಾರತ–2047; ಒಂದು ದೃಷ್ಟಿಕೋನ' ವಿಷಯವಾಗಿ, ನಿಟ್ಟೆ ವಿನಯ್ ಹೆಗ್ಡೆ ಸ್ಮಾರಕ ಉಪನ್ಯಾಸ ನೀಡಿ, ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿರುವ, ನಿರ್ಮಲಾ ಸೀತಾರಾಮನ್, ಕೊಲ್ಲೂರಿನಲ್ಲಿ ತಂಗಿದ್ದು, ಇಂದು ಬೆಳಗ್ಗೆ ಶ್ರೀ ಮೂಕಾಂಬಿಕಾ ದೇವಾಲಯಕ್ಕೆ ಭೇಟಿ ನೀಡಿ, ದರ್ಶನ ಪಡೆಯಲಿದ್ದಾರೆ.

<><><>

ರೇಲ್ವೆ ರಕ್ಷಣಾ ದಳದ, ಮಹಾ ನಿರ್ದೇಶಕಿ ಸೋನಾಲಿ ಮಿಶ್ರಾ, ಬೆಂಗಳೂರು ವಿಭಾಗದ, ಪ್ರಮುಖ ರೇಲ್ವೆ ನಿಲ್ದಾಣಗಳಲ್ಲಿ, ಭದ್ರತೆ ಪರಿಶೀಲಿಸಿದರು. ಆರ್.ಪಿ.ಎಫ್. ಸಿಬ್ಬಂದಿ ಯೋಗಕ್ಷೇಮಕ್ಕಾಗಿ ಕೈಗೊಂಡ ಕ್ರಮಗಳನ್ನು ಅವರು, ವೀಕ್ಷಿಸಿದರು. ಸರ್ ಎಂ. ವಿಶ್ವೇಶ್ವರಾಯ ಟರ್ಮಿನಸ್, ಬೆಂಗಳೂರು ರೇಲ್ವೆ ನಿಲ್ದಾಣ, ಕೃಷ್ಣರಾಜಪುರಂ ರೈಲು ನಿಲ್ದಾಣ, ಏಕೀಕೃತ ಸಿ.ಸಿ. ಟಿ.ವಿ. ಕಮಾಂಡ್ ಸೆಂಟರ್‌ಗೆ ಭೇಟಿ ನೀಡಿ, ಭದ್ರತಾ ನಿಗಾವಣೆ ಮೂಲಸೌಕರ್ಯಗಳನ್ನು ಮತ್ತಷ್ಟು ಬಲಪಡಿಸಲು, ಸೂಚಿಸಿದರು. ಬೆಂಗಳೂರು ವಿಭಾಗೀಯ ರೇಲ್ವೆ ವ್ಯವಸ್ಥಾಪಕ, ಆಶುತೋಷಕುಮಾರ ಸಿಂಗ್, ಇದ್ದರು.

<><><>

9ನೇ ಸುತ್ತಿನ, ಜಾನುವಾರು, ಕಾಲು ಬಾಯಿ ರೋಗದ ವಿರುದ್ಧ, ರಾಷ್ಟ್ರೀಯ ಲಸಿಕಾ ಮಾಸಿಕ ಅಭಿಯಾನ, ಮೇ 22ರ ವರೆಗೆ ನಡೆಯಲಿದೆ. ಸಂಪೂರ್ಣ ಲಸಿಕಾ ಪ್ರಕ್ರಿಯೆಯನ್ನು ಡಿಜಿಟಲಿಕರಿಸಿ, ಜಿ.ಪಿ.ಎಸ್ ಆಧಾರಿತ, 'ಪಶು ಧನ ಆಪ್' ನಲ್ಲಿ ದಾಖಲಿಸಲಾಗುತ್ತಿದೆ. ಗಡಿ ಜಿಲ್ಲೆ, ಬೀದರನಲ್ಲಿ, ಕಳೆದ ಐದು ದಿನಗಳಲ್ಲಿ, ಒಟ್ಟು 16 ಸಾವಿರದ 660 ಜಾನುವಾರುಗಳಿಗೆ ಕಾಲು ಬಾಯಿ ರೋಗದ ವಿರುದ್ಧ ಲಸಿಕೆ ನೀಡಲಾಗಿದೆ ಎಂದು, ಪಶು ಸಂಗೋಪನಾ ಇಲಾಖೆ, ಜಿಲ್ಲಾ ಉಪ ನಿರ್ದೇಶಕ ಡಾಕ್ಟರ್ ನರಸಪ್ಪ, ತಿಳಿಸಿದ್ದಾರೆ.

<><><>

ಡಾಕ್ಟರ್ ನರಸಪ್ಪ ಧ್ವನಿ – 34 ಸೆಕೆಂದುಗಳು

<><><>

ಕಲಬುರ್ಗಿ ತಾಲೂಕು, ನಾಗನಹಳ್ಳಿಯ, ಪೊಲೀಸ್ ತರಬೇತಿ ಮಹಾವಿದ್ಯಾಲಯದಲ್ಲಿ, ಇಂದು ಬೆಳಗ್ಗೆ 8 ಗಂಟೆಗೆ, ಒಟ್ಟು 97 ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಆಯೋಜಿತವಾಗಿದೆ. ಗೃಹ ಖಾತೆ ಸಚಿವ ಡಾಕ್ಟರ್ ಜಿ.ಪರಮೇಶ್ವರ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ, ಡಾಕ್ಟರ್ ಎಂ.ಎ. ಸಲೀಮ್ ಭಾಗವಹಿಸಿ, ಗೌರವ ವಂದನೆ ಸ್ವೀಕರಿಸಲಿದ್ದಾರೆ. ಬಳಿಕ 11 ಗಂಟೆಗೆ, ಕಲಬುರ್ಗಿಯಲ್ಲಿ ನೂತನ ಪೊಲೀಸ್ ವಸತಿ ಗೃಹಗಳನ್ನು, ಗೃಹ ಖಾತೆ ಸಚಿವರು, ಉದ್ಘಾಟಿಸಲಿದ್ದಾರೆ.

<><><>

'ಕೆಲಸ ನಿರ್ವಹಿಸುವ ಸ್ಥಳದಲ್ಲಿ, ಸುರಕ್ಷತೆ ಮತ್ತು ಆರೋಗ್ಯ' ಕಾಪಾಡುವ ವಿಶ್ವ ದಿನಾಚರಣೆ, ಇಂದು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, 2003 ರಲ್ಲಿ ಮೊದಲ ಬಾರಿಗೆ, ಈ ದಿನವನ್ನು ಆಚರಿಸಿತು.

<><><>

ಮೇ 16 ಮತ್ತು 17 ರಂದು, ಕನಕಗಿರಿ ಉತ್ಸವ ಆಯೋಜಿತವಾಗಿದೆ. ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಉತ್ಸವದ ಲಾಂಛನವನ್ನು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ, ಶಿವರಾಜ ತಂಗಡಗಿ ಅನಾವರಣ ಗೊಳಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ರಾಜ್ಯ ಸರ್ಕಾರದ 'ಎಂಟು ಶಿಕ್ಷಣ ಖಾತ್ರಿಗಳು' ಯೋಜನೆ; 50 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ರಾಜ್ಯ ಮಾಹಿತಿ ಹಕ್ಕು ಆಯೋಗ; ಕಳೆದ ಒಂದು ವರ್ಷದಲ್ಲಿ, ಎರಡನೇ ಹಂತದ, 40 ಸಾವಿರ ಮೇಲ್ಮನವಿ ಪ್ರಕರಣಗಳ, ಇತ್ಯರ್ಥ.
- ಬೆಂಗಳೂರು ವಿಭಾಗದ, ಪ್ರಮುಖ ರೇಲ್ವೆ ನಿಲ್ದಾಣಗಳ, ಭದ್ರತೆ ಪರಿಶೀಲಿಸಿದ, ರೇಲ್ವೆ ರಕ್ಷಣಾ ದಳದ, ಮಹಾ ನಿರ್ದೇಶಕಿ ಸೋನಾಲಿ ಮಿಶ್ರಾ.
- ಉಡುಪಿಯ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜೆಮ್ಸ್ ಆಂಡ್ ಜಿವೆಲ್ರಿಗೆ, ಇಂದು ಕೇಂದ್ರ ಸಚಿವರಾದ, ನಿರ್ಮಲಾ ಸೀತಾರಾಮನ್, ಭೇಟಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>